

ಹಂತವಾಗಿದೆ. ಸರಿಯಾಗಿ ಆಲಿಸಿದಾಗ ವಿಚಾರವು ಸ್ವೀಕಾರಗೊಂಡು ಸಾಕಷ್ಟು ವಿಷಯಗಳು (ಕೆಲವನ್ನು ಬಿಟ್ಟು) ಮನಸ್ಸಿನಲ್ಲಿ ಮುದ್ರಣವಾಗುತ್ತವೆ. ಮತ್ತೆ ಅದನ್ನು ಓದಿ ಒಂದೆರಡು ಬಾರಿ ಮತ್ತೆ ನೆನಪು ಮಾಡಿಕೊಂಡಾಗ ಕಲಿಕೆಯ ದೃಢೀಕರಣವಾಗುತ್ತದೆ. ದೃಢೀಕರಣವಾದ ಕಲಿಕೆಯನ್ನು ಮಾತ್ರ ಪರೀಕ್ಷೆಯಲ್ಲಿ ಅಥವಾ ಜೀವನದಲ್ಲಿ ನೆನಪಿಗೆ ತಂದುಕೊಳ್ಳಲು ಸಾಧ್ಯವೇ ಹೊರತು ಕೇವಲ ಸ್ವೀಕಾರಗೊಂಡು ನಂತರ ಮರೆತುಹೋದರೆ ಉಪಯೋಗವಿಲ್ಲ. ಕಲಿಕೆ ನೆನಪುಳಿಯುವ ಅತ್ಯುನ್ನತ ಹಂತ ಅಭಿಜ್ಞಾನ. ತಂದೆ ತಾಯಿಯ ಧ್ವನಿ, ಇಷ್ಟದ ಹಾಡುಗಾರನ ಧ್ವನಿಗಳೆಲ್ಲ ಕೇಳಿದೊಡನೆ ಗೊತ್ತಾಗುತ್ತದೆ. ಇದನ್ನು ನೆನಪಿಟ್ಟುಕೊಳ್ಳುವ ಕಷ್ಟವೇ ಇಲ್ಲ. ಏಕೆಂದರೆ ಈ ಸಂಗತಿಗಳು ಅಭಿಜ್ಞಾನದ ಹಂತವನ್ನು ತಲುಪಿರುತ್ತದೆ. ಹಾಗೆಂದು ಪಠ್ಯ ಕಲಿಕೆಯ ಎಲ್ಲ ವಿಷಯಗಳನ್ನೂ ಅಭಿಜ್ಞಾನವಾಗಿಸಲು ಸಾಧ್ಯವಿಲ್ಲ. ಅದರ ಅಗತ್ಯವೂ ಇಲ್ಲ. ಆದರೆ ಕಲಿಕೆಯ ದೃಢೀಕರಣವಾಗಬೇಕು.

## ಅಧ್ಯಯನ

ಓದುವಿಕೆ ಮತ್ತು ಅಧ್ಯಯನಕ್ಕೆ ವ್ಯತ್ಯಾಸವಿದೆ. ಓದುವಿಕೆಯಲ್ಲಿ ತಾತ್ಪರ್ಯ ಗೊತ್ತಾದರೆ ಸಾಕು. ಆದರೆ ಅಧ್ಯಯನದಲ್ಲಿ ಪ್ರತಿಯೊಂದು ವಿವರವೂ ಗೊತ್ತಾಗಬೇಕು.

ಆಲಿಸುವಿಕೆಯ ಮೂಲಕ ವಿಷಯದ ಗ್ರಹಿಕೆ ಆಗುತ್ತದೆ. ಬಹಳಷ್ಟು ವಿಷಯಗಳು ಮನಸಿನಲ್ಲಿ ಮುದ್ರಣವೂ ಆಗುತ್ತದೆ. ಕೆಲವು ಆಗುವುದಿಲ್ಲ. ಅದನ್ನು ಅಧ್ಯಯನದ ಸಂದರ್ಭದಲ್ಲಿ ಮುದ್ರಣ ಮಾಡಿಕೊಳ್ಳಬೇಕು. ಅಧ್ಯಯನದಲ್ಲಿ ಮುದ್ರಿತ ವಿಚಾರಗಳ ದೃಢೀಕರಣವಾಗಬೇಕು. ಪಾಠ ಬೋಧನೆ ನಡೆದ ದಿವಸವೇ ಅದನ್ನು ಅಧ್ಯಯನ ಮಾಡಬೇಕು. ಅಧ್ಯಯನದ ಸಂದರ್ಭದಲ್ಲಿ ಟಿಪ್ಪಣಿಗಳನ್ನು ಮಾಡಿಕೊಳ್ಳಬೇಕು.

## ಪ್ರಶ್ನೆಗಳ ಕೌಶಲ

ವರ್ಷದ ಅಂತ್ಯದಲ್ಲಿ ಬರೆಯಬೇಕಾದ ಪರೀಕ್ಷೆಯ ಪ್ರಶ್ನೆಪತ್ರಿಕೆ ಹೇಗಿರುತ್ತದೆಂಬುದು ವರ್ಷದ ಆರಂಭದಲ್ಲೇ ವಿದ್ಯಾರ್ಥಿಗಳಿಗೆ ಗೊತ್ತಿರಬೇಕು. ಆಗ ಅಧ್ಯಯನ ನಡೆಸುವಾಗ ವಿಷಯಗಳು ಪರೀಕ್ಷೆಯಲ್ಲಿ ಹೇಗೆ ಪ್ರಶ್ನೆಗಳಾಗಿ ಬರಬಲ್ಲವು ಎಂಬ ಕಲ್ಪನೆ ಇಟ್ಟುಕೊಂಡೇ ಅಧ್ಯಯನ ಮಾಡಲು ಆಗುತ್ತದೆ. ಪ್ರಶ್ನೆಗಳ ಸ್ವರೂಪದ ಅರಿವೂ ವಿದ್ಯಾರ್ಥಿಗಳಿಗಿರಬೇಕು. ಪ್ರಶ್ನೆಗಳು ಜ್ಞಾನ, ತಿಳಿವಳಿಕೆ, ಅನ್ವಯ, ಕೌಶಲ ಎಂಬ ನಾಲ್ಕು ಸ್ವರೂಪದಲ್ಲಿರುತ್ತವೆ. ಅಧ್ಯಯನ ನಡೆಸುವಾಗ ಇದು ಗೊತ್ತಿದ್ದರೆ ಅದಕ್ಕೆ ತಕ್ಕಂತೆ ಬರೆದುಕೊಳ್ಳಲು ಅಥವಾ ಯೋಚಿಸಿಕೊಳ್ಳಲು ಸಾಧ್ಯವಾಗುತ್ತದೆ.

## ಆಸಕ್ತಿಯನ್ನು ಬೆಳೆಸಿಕೊಳ್ಳುವುದು

ಅಧ್ಯಯನವು ಸಹಜ ಆಸಕ್ತಿ ಆಗುವುದಿಲ್ಲ. ಒಂದು ಸಿನಿಮಾ ನೋಡಿದರೆ ಇನ್ನೊಂದು ನೋಡುವ ಎನಿಸುತ್ತದೆ.

ಒಂದು ನೃತ್ಯ ಮಾಡಿದರೆ ಇನ್ನೊಂದು ನೃತ್ಯ ಮಾಡೋಣ ಎನಿಸುತ್ತದೆ. ಭಿನ್ನಲಿಂಗಿಯೊಂದಿಗೆ ಹರಟೆ ಹೊಡೆದರೆ ಇನ್ನೊಂದಷ್ಟು ಹರಟೆ ಹೊಡೆಯೋಣ ಎನಿಸುತ್ತದೆ. ಏಕೆಂದರೆ ಇವೆಲ್ಲಕ್ಕೂ ಆಕರ್ಷಿಸುವ ಗುಣವಿದೆ. ಆದರೆ ಇದೆಲ್ಲವೂ ಮಿತಿಯಲ್ಲಿದ್ದಾಗ ಮಾತ್ರ ವಿಕಾಸಕ್ಕೆ ಪೂರಕವಾಗಿರುತ್ತದೆ. ಹಾಗೆಂದು ಎರಡು ಪುಟ ಅಧ್ಯಯನ ಮಾಡಿದರೆ 'ಎರಡು ಪುಟಗಳು ಮುಗಿದರೆ ಸಾಕಪ್ಪಾ' ಎನಿಸುತ್ತದೆಯೇ ಹೊರತು ಇನ್ನೂ ನಾಲ್ಕು ಪುಟ ಅಧ್ಯಯನ ಮಾಡೋಣವೆಂದು ಅನಿಸುವುದಿಲ್ಲ. ಏಕೆಂದರೆ ಅದಕ್ಕೆ ಆಕರ್ಷಿಸುವ ಗುಣವಿಲ್ಲ. ಪಟ್ಟುಹಿಡಿದು ಅಧ್ಯಯನಕ್ಕೆ ತೊಡಗಿದವನಿಗೆ ಮಾತ್ರ ಅದು ಒಲಿಯುವುದು.

ಆದರೆ ಕಲಿಕೆಗೆ ಮಿತಿ ಇಲ್ಲ. ಎಲ್ಲವನ್ನೂ ಕಳೆದುಕೊಂಡರೂ ಕಲಿಕೆ ವ್ಯಕ್ತಿಯನ್ನು ರಕ್ಷಿಸುತ್ತದೆ. ಕಲಿಕೆಯು ವ್ಯಕ್ತಿಯನ್ನು ಯಾವ ಎತ್ತರಕ್ಕೆ ಎತ್ತಬಲ್ಲುದು ಎನ್ನುವುದು ಊಹಿಸಲಿಕ್ಕೂ ಅಸಾಧ್ಯ. ಆದ್ದರಿಂದ ಪ್ರಜ್ಞಾಪೂರ್ವಕವಾಗಿ ಪಟ್ಟು ಹಿಡಿದು ಪ್ರಾರಂಭದ ಒಂದೆರಡು ತಿಂಗಳು ಅಧ್ಯಯನಕ್ಕೆ ತೊಡಗಬೇಕು. ಆಗ ಅಧ್ಯಯನವೂ ಆನಂದದ ಅನುಭವವನ್ನು ಕೊಡಲು ತೊಡಗುತ್ತದೆ. ಕಲಿಕೆಯೂ ಆಸಕ್ತಿದಾಯಕವಾಗುತ್ತದೆ.